9

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 300 |
| ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 06.12.2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಾರವಾರ-ಇಳಕಲ್ ರಾಜ್ಯ ಹೆದ್ದಾರಿಯ ಭಾಗವಾಗಿರುವ ಗದಗ-ಲಕ್ಷ್ಮೇಶ್ವರ ಸವಣೂರ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಹೌದು ಸರಕಾರದ ಗಮನಕ್ಕೆ ಬಂದಿದೆ.<br>ಕಾರವಾರ-ಇಳಕಲ್ ರಾಜ್ಯ ಹೆದ್ದಾರಿ-06 ರ ಭಾಗವಾಗಿರುವ ಗದಗ-ಲಕ್ಷ್ಮೇಶ್ವರ ಸವಣೂರು ಸಂಪರ್ಕಿಸುವ ರಸ್ತೆಯು 176.89 ರಿಂದ 245.91 ಕಿ.ಮೀ. ವರೆಗೆ ಒಟ್ಟು 69.02 ಕಿ.ಮೀ. ಉದ್ದವಿರುತ್ತದೆ. ಇದರಲ್ಲಿ 35.14 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಿ ಸುಸ್ಥಿತಿಯಲ್ಲಿರುತ್ತದೆ. ಉಳಿದ ರಸ್ತೆ ನಿರ್ವಹಣೆ ಪ್ರಗತಿಯಲ್ಲಿದ್ದು, ಒಟ್ಟಾರೆ ನಿರ್ವಹಣೆ ವಿವರ ಕೆಳಗಿನಂತಿರುತ್ತದೆ: |

| ಕ್ರಸಂ | ಲೆಕ್ಕ ಶೀರ್ಷಿಕೆ | ಅಭಿವೃದ್ಧಿಪಡಿಸಲು ನಿಗದಿಪಡಿಸಿದ ಉದ್ದ ಕಿ.ಮೀ.ಗಳಲ್ಲಿ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ | ಷರಾ |
|---|---|---|---|---|
| 1 | ರಾಜ್ಯ ಹೆದ್ದಾರಿ ಸುಧಾರಣೆ | 20.82 | 2640.00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಕೆ.ಆರ್.ಡಿ.ಸಿ.ಎಲ್ | 11.29 | 603.00 | 8.00 ಕಿ.ಮೀ. ಪೂರ್ಣಗೊಂಡಿದ್ದು, 3.29 ಕಿ.ಮೀ. ಪ್ರಗತಿಯಲ್ಲಿದೆ |
| 3 | ಕೆಷಿಪ್ | 5.41 | 360.00 | ಕಾಮಗಾರಿ ಪೂರ್ಣಗೊಂಡಿದೆ |
| 4 | ನಿರ್ವಹಣಾ ಕಾಮಗಾರಿ | 30.59 | 32.95 | ಪ್ರಗತಿಯಲ್ಲಿದೆ |
| 5 | - | - | | 0.91 ಓವರಲ್ಯಾಪ |
| | ಒಟ್ಟು | **69.02** | **3635.95** | |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಆ) | ಕಾರವಾರ-ಇಳಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಿಸಲು ಸರ್ಕಾರ ಚಿಂತನೆ ನಡೆಸಿರುವುದು ನಿಜವೇ; ಹಾಗಿದ್ದಲ್ಲಿ, ಕೇಂದ್ರಕ್ಕೆ ಆ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆಯೇ? | ಕಾರವಾರ ಇಳಕಲ್ ರಾಜ್ಯ ಹೆದ್ದಾರಿ-6 ನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಿಸಲು ಅನುವಾಗುವಂತೆ ರಸ್ತೆ ಯೋಜನಾ ವರದಿಯನ್ನು ತಯಾರಿಸಲು M/s. Inter Continental Consultants and Technocrals Pvt., Ltd., Delhi ರವರನ್ನು ಸಮಾಲೋಚಕರನ್ನಾಗಿ ನೇಮಿಸಲಾಗಿದ್ದು, Final alignment ವರದಿಯನ್ನು RO MoRT&H ರವರಿಗೆ ದಿನಾಂಕ:21.01.2019ರಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.<br>ಈ ಮಧ್ಯೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ಕೇಂದ್ರ ಸರ್ಕಾರ ಇವರ ಪತ್ರ ಸಂಖ್ಯೆ. RW/NH-33044/24/S&R(P&B), ದಿನಾಂಕ: 28.07.2020ರಲ್ಲಿ ತಾತ್ವಿಕವಾಗಿ ಅನುಮೋದನೆಗೊಂಡ ಪ್ರಸ್ತಾವನೆಯನ್ನು ಯಥಾಸ್ಥಿತಿಯಲ್ಲಿ ಪೂರ್ವ ಮುಕ್ತಾಯಗೊಳಿಸಲು ಸೂಚಿಸಿರುತ್ತದೆ. ಅದರಂತೆ ಈ ರಸ್ತೆಯು ಪ್ರಸಕ್ತ ರಾಜ್ಯ ಹೆದ್ದಾರಿಯಾಗಿ ಮುಂದುವರೆದಿದೆ. |

ಲೋಇ 53 ಸಿಕ್ಯೂಎನ್ 2023(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು